# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1240 |
| ಸದಸ್ಯರ ಹೆಸರು | ಶ್ರೀ. ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾಸನ ಜಿಲ್ಲೆಯಲ್ಲಿರುವ ಕಲ್ಲು ಕ್ವಾರಿ ಮತ್ತು ಕ್ರಷರ್‌ಗಳ ತಾಲ್ಲೂಕುವಾರು ವಿವರ ನೀಡುವುದು: ಕಲ್ಲು ಕ್ವಾರಿ ಮತ್ತು ಕ್ರಷರ್‌ಗಳಿಗೆ ಅನುಮತಿ ನೀಡಲು ಮತ್ತು ಲೈಸೆನ್ಸ್ ನವೀಕರಣ ಮಾಡಿಕೊಳ್ಳಲು ಸರ್ಕಾರವು ನಿಗದಿಪಡಿಸಿರುವ ಮಾನದಂಡಗಳೇನು: (ಮಾಹಿತಿ ನೀಡುವುದು) | ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ 98 ಕಟ್ಟಡ ಕಲ್ಲು, 36 ಅಲಂಕಾರಿಕ ಶಿಲೆ ಗಣಿ ಗುತ್ತಿಗೆಗಳು ಮತ್ತು 71 ಕ್ರಷರ್ ಘಟಕಗಳನ್ನು ಮಂಜೂರು ಮಾಡಲಾಗಿರುತ್ತದೆ. ತಾಲ್ಲೂಕುವಾರು ವಿವರ ಕೆಳಗಿನಂತಿರುತ್ತದೆ. |

| ಕ್ರ ಸಂ. | ತಾಲ್ಲೂಕು | ಕಟ್ಟಡ ಕಲ್ಲು | ಅಲಂಕಾರಿಕ ಶಿಲೆ | ಕ್ರಷರ್ ಘಟಕ |
|---|---|---|---|---|
| 1 | ಆಲೂರು | 16 | 3 | 6 |
| 2 | ಅರಕಲಗೂಡು | 6 | 7 | 5 |
| 3 | ಅರಸೀಕೆರೆ | 31 | 2 | 17 |
| 4 | ಬೇಲೂರು | 11 | 9 | 4 |
| 5 | ಚನ್ನರಾಯಪಟ್ಟಣ | 5 | 3 | 4 |
| 6 | ಹಾಸನ | 17 | 7 | 26 |
| 7 | ಹೊಳೆನರಸೀಪುರ | 12 | 4 | 9 |
| 8 | ಸಕಲೇಶಪುರ | 0 | 1 | 0 |
| | ಒಟ್ಟು | **98** | **36** | **71** |

ರಾಜ್ಯ ಸರ್ಕಾರವು ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016ನ್ನು ಜಾರಿಗೆ ತಂದಿರುತ್ತದೆ. ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಉಪಖನಿಜ ಗಣಿ ಗುತ್ತಿಗೆಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಖನಿಜವನ್ನು ತೆಗೆಯಲು ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ, ಭೂಪರಿವರ್ತನೆ ಆದೇಶ ಮತ್ತು ಪರಿಸರ ಅನುಮತಿ ಪತ್ರ ಪಡೆದು ಕಲ್ಲು ಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ.

ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ನಿಯಮಗಳು, 2012ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಿಗೆ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.

--2

| | | |
|---|---|---|
| | | ಅವರಂತೆ ಕಲಂ 6(3)ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ 6 ಮತ್ತು 6–A ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, 'ಫಾರಂ–ಬಿ1' ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಸಿಎಫ್ಇ (Consent for Establishment) ಹಾಗೂ ಸಿಎಫ್ಒ (Consent for Operation) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ 'ಫಾರಂ–ಸಿ' (ಕ್ರಷರ್ ಲೈಸೆನ್ಸ್) ರಲ್ಲಿ ಕ್ರಷರ್ ಪರವಾನಗಿ ನೀಡಲಾಗುವುದು. |
| ಆ) | ಈ ಕಲ್ಲು ಕ್ವಾರಿ ಮತ್ತು ಕ್ರಷರ್‌ಗಳು ಸರ್ಕಾರದ ಮಾನದಂಡಗಳಂತೆ ಕಾರ್ಯನಿರ್ವಹಿಸುತ್ತಿವ ಬಗ್ಗೆ ಯಾರು ಮೇಲ್ವಿಚಾರಣೆ ನಡೆಸುವರು: ಈ ಕಲ್ಲು ಕ್ವಾರಿ ಮತ್ತು ಕ್ರಷರ್ ಗಳನ್ನು ಕಾಲ ಕಾಲಕ್ಕೆ ತಪಾಸಣೆ ಮಾಡಿರುವ ತಪಾಸಣಾ ವರದಿಗಳ ವಿವರ ನೀಡುವುದು: | ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: ಸಿಐ 21 ಎಂ.ಎಂ.ಎನ್ (2) 2014, ಬೆಂಗಳೂರು, ದಿನಾಂಕ 21.01.2014ರಂತೆ ಅನಧಿಕೃತ ಖನಿಜ ಗಣಿಗಾರಿಕೆ ಸಾಗಾಣಿಕೆ ಮತ್ತು ದಾಸ್ತಾನು ತಡೆಗಟ್ಟಲು ಕಂದಾಯ, ಅರಣ್ಯ ಇಲಾಖೆ ಪೋಲೀಸ್ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ.<br>ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 40ರಂತೆ ಗುತ್ತಿಗೆದಾರರು ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ವಾರ್ಷಿಕವಾಗಿ ತೆಗೆದ ಉಪಖನಿಜ ಪ್ರಮಾಣ, ಸಾಗಾಣಿಕೆ ಮಾಡಿದ ಉಪಖನಿಜದ ವಿವರ ಮತ್ತು ಸರ್ಕಾರಕ್ಕೆ ಪಾವತಿಸಿದ ವಿವರವನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಗುತ್ತಿಗೆದಾರರು ಸಲ್ಲಿಸುವ ದಾಖಲೆಗಳನುಸಾರ ಸಕ್ಷಮ ಪ್ರಾಧಿಕಾರಿಯು ಕಲ್ಲುಗಣಿ ಗುತ್ತಿಗೆ ಪ್ರದೇಶವನ್ನು ತಪಾಸಣೆ ನಡೆಸಿ ಗುತ್ತಿಗೆ ಪ್ರದೇಶದಲ್ಲಿ ತೆಗೆದಿರುವ ಖನಿಜವನ್ನು ಅಂದಾಜಿಸಿ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ಬಿಡುಗಡೆಗೊಳಿಸಲಾಗುತ್ತದೆ. |
| ಇ) | ಹಾಸನ ಜಿಲ್ಲೆಯಲ್ಲಿರುವ ಕಲ್ಲು ಕ್ವಾರಿ ಮತ್ತು ಕ್ರಷರ್‌ಗಳಲ್ಲಿ ಕಳೆದ 03 ವರ್ಷಗಳಲ್ಲಿ ನಡೆದಿರುವ ಅವಘಡಗಳ ಬಗ್ಗೆ ಮಾಹಿತಿ ನೀಡುವುದು: ಈ ಕಲ್ಲು ಕ್ವಾರಿ ಮತ್ತು ಕ್ರಷರ್ ಗಳ ವಿರುದ್ಧ ಕಳೆದ 03 ವರ್ಷಗಳಲ್ಲಿ ಸಾರ್ವಜನಿಕರಿಂದ ಸ್ವೀಕೃತವಾಗಿರುವ ದೂರು | ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಟ್ಟಾಯ ಹೋಬಳಿ, ಕಟ್ಟಾಯ ಗ್ರಾಮದ ಸರ್ವೆ ನಂ. 56ರ ಅರಣ್ಯ ಪ್ರದೇಶದಲ್ಲಿ ದಿನಾಂಕ 01.05.2017ರ ಸಾರ್ವಜನಿಕ ರಜಾ ದಿನದಂದು ಅಧಿಕಾರಿಗಳ ಚಲನವಲನಗಳನ್ನು ಗಮನಿಸಿ ಸ್ಥಳೀಕರು ಅರಣ್ಯ ಪ್ರದೇಶದಲ್ಲಿ ಸ್ಫೋಟಕಗಳನ್ನು ಬಳಸಿ ಕಲ್ಲುಗಣಿಗಾರಿಕೆ ಮಾಡಲು ಯತ್ನಿಸಿರುತ್ತಾರೆ. ಆ ಸಮಯದಲ್ಲಿ ಅಂದರೆ ಸಂಜೆ ಸುಮಾರು 6–7 ಗಂಟೆಯಲ್ಲಿ ಗುಡುಗು ಮಿಂಚು ಸಮೇತ ಮಳೆಯಿಂದ ಆಕಸ್ಮಿಕವಾಗಿ ಸ್ಫೋಟನೆಗೊಂಡ ಪರಿಣಾಮ ಮೂರು ಜನರು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾರೆ. ಈ ಸಂಬಂಧ ಗೊರೂರು ಪೊಲೀಸ್ ಠಾಣೆಯಲ್ಲಿ ಎಕ್ಸ್‌ಪ್ಲೋಸಿವ್ ಸಬ್‌ಸ್ಟೆನ್ಸ್ ಆಕ್ಟ್ 1908ರಡಿಯಲ್ಲಿ ಮೊಕದ್ದಮೆ ಸಂಖ್ಯೆ 62/17ನ್ನು ದ್ಯಾಖಲಿಸಿ ತನಿಖೆ ಕೈಗೊಂಡಿರುತ್ತಾರೆ. |

ಅರ್ಜಿಗಳೆಷ್ಟು: ಈ ದೂರು ಅರ್ಜಿಗಳಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು: ತಾಲ್ಲೂಕುವಾರು ಮತ್ತು ಕ್ವಾರಿವಾರು ಮಾಹಿತಿಗಳನ್ನು ನೀಡುವುದು.

ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ರಂಗಾಪುರ ಕಾವಲು ಗ್ರಾಮದ ಸರ್ವೆ ನಂ.1 ರಲ್ಲಿರುವ ಕ್ರಷರ್ ಘಟಕದಲ್ಲಿ ಕೂಲಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಸತ್ವೀರ್ ಸಿಂಗ್ ಎಂಬುವರು ದಿನಾಂಕ 18.05.2018 ರಂದು ಮೃತಪಟ್ಟಿರುವುದಾಗಿ ಅರಸೀಕೆರೆ ತಾಲ್ಲೂಕು ಗಂಡಸಿ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 200/2018ರಂತೆ ಪ್ರಕರಣ ದಾಖಲಾಗಿರುತ್ತದೆ.

ಮುಂದುವರೆದು ಕಳೆದ ಮೂರು ವರ್ಷಗಳಲ್ಲಿ ಕಲ್ಲುಗಣಿ ಗುತ್ತಿಗೆ ಹಾಗೂ ಕ್ರಷರ್ ಘಟಕಗಳ ಮೇಲೆ ಸ್ವೀಕೃತವಾಗಿರುವ ದೂರು ಅರ್ಜಿಗಳ ವಿವರ ಕೆಳಕಂಡಂತಿದೆ:

| ಕ್ರ ಸಂ. | ವರ್ಷ | ದೂರು ಅರ್ಜಿಗಳು |
|---|---|---|
| 1 | 2017–18 | 19 |
| 2 | 2018–19 | 28 |
| 3 | 2019–20 | 21 |

ಸದರಿ ದೂರು ಅರ್ಜಿಗಳನ್ನು ಆಗಿಂದ್ದಾಗ್ಗೆ ಜಿಲ್ಲಾ ಟಾಸ್ಕ್‌ಪೋರ್ಸ್ ಸಮಿತಿ ವತಿಯಿಂದ ಸ್ಥಳ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ.

**ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಗಣಿಗಾರಿಕೆ/ಸಾಗಾಣಿಕೆ ವಿರುದ್ಧ ದಾಖಲಿಸಲಾದ ಮೊಕದ್ದಮೆಗಳ ವಿವರ ಕೆಳಗಿನಂತಿವೆ.**

| ಕ್ರ ಸಂ. | ತಾಲ್ಲೂಕು | 2017–18 | | 2018–19 | | 2019–20 | |
|---|---|---|---|---|---|---|---|
| | | ಸಾಗಾಣಿಕೆ | ಗಣಿಗಾರಿಕೆ | ಸಾಗಾಣಿಕೆ | ಗಣಿಗಾರಿಕೆ | ಸಾಗಾಣಿಕೆ | ಗಣಿಗಾರಿಕೆ |
| 1 | ಆಲೂರು | 82 | 0 | 9 | 0 | 7 | 0 |
| 2 | ಅರಕಲಗೂಡು | 0 | 2 | 0 | 0 | 0 | 0 |
| 3 | ಅರಸೀಕೆರೆ | 0 | 0 | 7 | 0 | 3 | 0 |
| 4 | ಬೇಲೂರು | 5 | 0 | 7 | 0 | 8 | 0 |
| 5 | ಚನ್ನರಾಯಪಟ್ಟಣ | 0 | 2 | 3 | 0 | 2 | 1 |
| 6 | ಹಾಸನ | 9 | 1 | 0 | 3 | 7 | 0 |
| 7 | ಹೊಳೆನರಸೀಪುರ | 3 | 0 | 2 | 0 | 2 | 0 |
| 8 | ಸಕಲೇಶಪುರ | 30 | 0 | 25 | 0 | 2 | 0 |
| | **ಒಟ್ಟು** | **129** | **5** | **53** | **3** | **31** | **1** |

2019–20ನೇ ಸಾಲಿನಲ್ಲಿ ಉಪಖನಿಜ ಸಾಗಾಣಿಕೆ ಪರವಾನಗಿ ಇಲ್ಲದೆ ಸಾಗಿಸುತ್ತಿದ್ದ ಒಟ್ಟು 49. ವಾಹನಗಳಿಗೆ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮಗಳಂತೆ ರೂ.10,09,100/–ಗಳ ದಂಡವನ್ನು ವಸೂಲಿಸಿ ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ.

ಸಂಖ್ಯೆ: ಸಿಐ 153 ಎಂಎಂಎನ್ 2020

(ಸಿ.ಸಿ. ಪಾಟೀಲ್)
ಗಣಿ ಮತ್ತು ಭೂವಿಜ್ಞಾನ ಸಚಿವರು